ಸಂಯುಕ್ತ ಕರ್ನಾಟಕ

# ಅನಾಥರಿಗೆ ಮಿಡಿದ ಮುಗ್ಧ ಹೃದಯ...



▪ ಶೃತಿ ಕೋಲಾಚಲ

ಅಪ್ಪ ಯಾರೋ? ಅಮ್ಮ ಯಾರೋ? ತಾನು ಮಾಡದ ತಪ್ಪಿಗೆ ಹೆತ್ತವರಿಂದ ದೂರವಾಗಿ, ಸಮಾಜದಲ್ಲಿ ನಿಂದನೆಗೊಳಗಾಗಿ ಅನಾಥ ಎಂಬ ಹಣೆ ಪಟ್ಟಿ ಕಟ್ಟಿಕೊಂಡ ಮಕ್ಕಳ ಪಾಲಿಗೆ ಅನಾಥಾಲಯಗಳೇ ಆಲಯವಿದ್ದಂತೆ. ಅಲ್ಲಿ ಯಾವುದೇ ಜಾತಿ-ಭೇದವಿಲ್ಲ, ಜೊತೆಗಿರುವ ಮಕ್ಕಳೇ ಸೋದರ-ಸೋದರಿಯರು. ಅಲ್ಲಿನ ಸಿಬ್ಬಂದಿಯೇ ಪೋಷಕರು ಎಂದು ನಂಬಿ ಬದುಕುವ ಮಕ್ಕಳಿಗೆ ಸ್ಫೂರ್ತಿಯ ಸೆಲೆ ಅನಾಥಾಶ್ರಮ.

ಇತರ ಮಕ್ಕಳಿಗೆ ಸಿಗುವ ಅಪ್ಪ-ಅಮ್ಮನ ಪ್ರೀತಿ ನಮಗ್ಯಾಕೆ ಇಲ್ಲ ಎಂಬ ಹಲವು ಪ್ರಶ್ನೆಗಳನ್ನು ತಮ್ಮಷ್ಟಕ್ಕೆ ತಾವೇ ಹಾಕಿಕೊಂಡು ಬದುಕುವ ಆ ಮಕ್ಕಳ ಬದುಕಿನಲ್ಲಿ ಆಶಾಕಿರಣ ಮೂಡಿಸುವುದು ಪ್ರಜ್ಞಾವಂತ ಸಮಾಜದ ಜವಾಬ್ದಾರಿಯಾಗಿದೆ. ಅವರಿಗೂ ಉತ್ತಮ ಬದುಕು, ಆರೋಗ್ಯ, ಶಿಕ್ಷಣ ಪಡೆಯುವ ಹಕ್ಕಿದೆ. ಆದರೆ, ಅಂತಹ ಮಕ್ಕಳನ್ನು ಗುರುತಿಸಿ ನೆರವಿನ ಹಸ್ತ ಚಾಚುವವರ ಸಂಖ್ಯೆ ಅತಿ ವಿರಳ.

ಅನಾಥ ಮಕ್ಕಳಿಗೆ ಆಶ್ರಯ ನೀಡಿರುವ ಅದೆಷ್ಟೋ ಅನಾಥಾಶ್ರಮಗಳಲ್ಲಿ ಮಕ್ಕಳಿಗೆ ಸರಿಯಾಗಿ ಊಟ, ಬಟ್ಟೆಯಂತಹ ಮೂಲ ಸೌಕರ್ಯಗಳೂ ಸಹ ಮರೀಚಿಕೆಯಾಗಿವೆ. ವಿದ್ಯಾರ್ಥಿಗಳ ಪಾಲಿಗೆ ಜ್ಞಾನ ದೇಗುವಾಗಿರುವ ಶಾಲೆಯು ಅವರಲ್ಲಿ ಮಾನವೀಯ ಮೌಲ್ಯಗಳು, ನೈತಿಕತೆಯ ಬೀಜ ಬಿತ್ತುವ ಪ್ರಮುಖ ಶಕ್ತಿ ಕೇಂದ್ರವಿದ್ದಂತೆ. ಅಂತೆಯೇ, ಇಲ್ಲೊಬ್ಬ ಬಾಲಕಿಯ ಮನಸ್ಸು ತನ್ನ ಶಾಲೆಯ ಬಳಿ ಇರುವ ಅನಾಥಾಶ್ರಮದ ಅವ್ಯವಸ್ಥೆ ಸರಿಪಡಿಸಲು ಮಿಡಿದಿದೆ.



ಬೆಂಗಳೂರಿನ ಕನಕಪುರ ರಸ್ತೆಯಲ್ಲಿರುವ ಜೈನ್ ಇಂಟರ್‌ನ್ಯಾಷನಲ್ ವಸತಿ ಶಾಲೆಯ 10ನೇ ತರಗತಿ ವಿದ್ಯಾರ್ಥಿನಿ ಮಹಾರಾಷ್ಟ್ರದ ಗೋಂದ್ಯ ಮೂಲದ ಜಿಗ್ಯಾಶಾ, ಸಮೀಪದಲ್ಲೇ ಇರುವ ಅನಾಥಾಶ್ರಮಕ್ಕೆ ತನ್ನದೇ ಆದ ವಿಶಿಷ್ಟ ರೀತಿಯ ಸೇವೆ ಸಲ್ಲಿಸಿದ್ದಾಳೆ.

**ಬಂದ ಆದಾಯ ದಾನ**

ಇತ್ತೀಚೆಗೆ ನಡೆದ ಶಾಲಾ ವಾರ್ಷಿಕೋತ್ಸವದಲ್ಲಿ ತಾನೇ ಸ್ವತಃ ತಯಾರಿಸಿದ ವೈವಿಧ್ಯಮಯ ಚಾಕೋಲೆಟ್, ತಿಂಡಿ-ತಿನಿಸುಗಳು ಮತ್ತು ಕಲಾಕೃತಿಗಳನ್ನು ಆಕರ್ಷಕವಾದ ಪ್ಯಾಕ್‌ಗಳಲ್ಲಿ ಅಲಂಕರಿಸಿ ನೆರೆದ ಪೋಷಕರಿಗೆ ಮಾರಿದಳು. ಅವುಗಳನ್ನು ಮಾರಿ ಬಂದ ಸುಮಾರು 25 ಸಾವಿರ ರೂ. ಮೊತ್ತವನ್ನು ಹತ್ತಿರದ ಅನಾಥಾಶ್ರಮಕ್ಕೆ ದಾನ ಮಾಡಿದಳು.

ಅಂದಹಾಗೆ, ಈ ಎಲ್ಲ ವಸ್ತುಗಳನ್ನು ತಯಾರಿಸಲು ಜಿಗ್ಯಾಶಾ ಸತತ 3 ದಿನಗಳ ಕಾಲ ಶ್ರಮಿಸಿದ್ದಾಳೆ. ಇವಳ ಕಾರ್ಯಕ್ಕೆ ವಸತಿ ನಿಲಯದ ಪಾಕಶಾಲಾ ಸಿಬ್ಬಂದಿ, ಸ್ನೇಹಿತರೂ ಸಾಥ್ ನೀಡಿದ್ದಾರೆ.

ಶಾಲೆಯ ಬಳಿ ಇರುವ ಅನಾಥಾಶ್ರಮದಲ್ಲಿ ವಿದ್ಯುತ್, ಕುಡಿಯುವ ನೀರು ಇನ್ನಿತರ ಮೂಲಸೌಕರ್ಯಗಳ ಕೊರತೆ ಇರುವುದನ್ನು ಗಮನಿಸಿದ ಈ ಪುಟ್ಟ ಬಾಲಕಿಯ ಮನಸ್ಸು, ಅಲ್ಲಿನ ಸಮಸ್ಯೆ ನಿವಾರಣೆಗೆ ಕೈಲಾದ ನೆರವು ನೀಡಲು ಪ್ರೇರಣೆ ಕೊಟ್ಟಿತು. ಅನಾಥಾಶ್ರಮದಲ್ಲಿರುವ ಸಮಸ್ಯೆಗಳನ್ನು ಕಂಡು ಮರುಗಿದ ಬಾಲೆ, ತನಗೆ ತಿಳಿದ ತಿಂಡಿ-ತಿನಿಸು, ಕಲಾಕೃತಿಗಳನ್ನು ತಯಾರಿಸಿ ಮಾರಿ ಬಂದ ಹಣವನ್ನು ಅನಾಥಾಲಯಕ್ಕೆ ದಾನ ಮಾಡಲು ಮುಂದಾದಳು. ಜಿಗ್ಯಾಶಾಳ ಸೇವೆಗೆ ಶಾಲಾ ಸಿಬ್ಬಂದಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಎಷ್ಟಿದ್ದರೂ ಇನ್ನಷ್ಟು, ಮತ್ತಷ್ಟು ಬೇಕು ಎಂಬ ದುರಾಸೆಯಿಂದ ತುಂಬಿ ತುಳುಕುವ ಜನರ ನಡುವೆ ಈ ಪುಟ್ಟ ಬಾಲಕಿಯಲ್ಲಿರುವ ಸೇವಾ ಮನೋಭಾವ ನಿಜಕ್ಕೂ ಶ್ಲಾಘನೀಯ. ಇವಳ ಸಮಾಜ ಸೇವೆ ಹೀಗೆ ಮುಂದುವರೆಯಲಿ ಎಂದು ಆಶಿಸೋಣ...